ANNEXURE II

ಬೆಂಗಳೂರು ನಗರಕ್ಕೆ ಕಾವೇರಿ ೩ನೇ ಹಂತದ ಯೋಜನೆಯಿಂದ ನೀರು ಪೂರೈಸುವ ಬಗ್ಗೆ.

೧೧ (೧೫) ಶ್ರೀ ಪಿ ರಾವ್‌ದೇವ್ (ಮಲ್ಲೇಶ್ವರ).—ವಸತಿ ಹಾಗೂ ನಗರಾಭಿವೃದ್ಧಿ ವ ಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ.—

(ಅ) ಬೆಂಗಳೂರು ನಗರಕ್ಕೆ ಕುಡಿಯುವ ನೀರನ್ನು ಪ್ರಾರಂಭಿಸಿದ ಕಾವೇರಿ ೨ನೇ ಹಂತದ ಯೋಜನೆ ಯಾವ ಹಂತದಲ್ಲಿದೆ.

(ಆ) ಮಾನ್ಯ ಮುಖ್ಯಮಂತ್ರಿಗಳು ಹೇಳಿದಂತೆ ೧೯೮೧ರ ಅಂತ್ಯದೊಳಗೆ ಈ ಯೋಜನೆಯು ಪ್ರಕಾರ ಹೆಚ್ಚಿನ ನೀರನ್ನು ಕೊಡಲು ಸಾಧ್ಯವೇ.

(ಇ) ಹಾಗಿಲ್ಲದಿದ್ದಲ್ಲಿ ಈ ಯೋಜನೆ ಯಾವಾಗ ಮುಗಿಯುತ್ತದೆ ಮತ್ತು ಹೆಚ್ಚಿನ ಕುಡಿಯುವ ನೀರನ್ನು ಯಾವಾಗ ಒದಗಿಸಲು ಸಾಧ್ಯ.

ಶ್ರೀ ಧರ್ಮಸಿಂಗ್ (ವಸತಿ ಹಾಗೂ ನಗರಾಭಿವೃದ್ಧಿ ಮಂತ್ರಿಗಳು).—

ಉತ್ತರ—(ಅ) ೧. ಕಾವೇರಿ ೨ನೇ ಹಂತದ ಯೋಜನೆಯು ಭರದಿಂದ ಸಾಗಿದ್ದು, ಈಗಾಗಲೇ ೫೫ ಕಿ.ಮೀ. ವರೆಗೆ ನೀರನ್ನು ಸಾಗಿಸುವ ಕೊಳವೆಗಳನ್ನು ಹಾಕುವ ಕಾರ್ಯ ಪೂರ್ಣಗೊಂಡಿದೆ. ತೊರೆ ಕಾಡನಹಳ್ಳಿಯಿಂದ ಬೆಂಗಳೂರಿನವರೆಗೆ ೭೭ ಕಿ ಮೀ. ಉದ್ದಕ್ಕೂ ಕೊಳವೆಗಳನ್ನು ಹಾಕಲು ನೆಲವನ್ನು ಅಗೆಯಲಾಗಿದೆ.

೨. ಜಲಶುದ್ಧೀಕರಣ ಕಾರ್ಯಾಗಾರದ ಕೆಲಸ ನಡೆಯುತ್ತಿದ್ದು ಮುಂದಿನ ತಿಂಗಳ ಅಂತ್ಯದೊಳಗೆ ಮುಗಿಯುವುದು. ಈಗಾಗಲೇ ಪಂಪ್‌ಹೌಸ್ ಮತ್ತು ಶುದ್ಧೀಕರಣ ನೀರಿನ ಸಂಗ್ರಹ ಜಲಾಶಯಗಳ ನಿರ್ಮಾಣ ಮುಕ್ತಾಯವಾಗಿದೆ.

೩ ನಗರದಲ್ಲಿ ನೀರನ್ನು ಶೇಖರಿಸುವ ೭ ಮಟ್ಟದ ಜಲಾಶಯಗಳ ಕೆಲಸ ನಡೆಯುತ್ತಿದೆ. ಇನ್ನು ಜಲಾಶಯವನ್ನು ಹೈಗ್ರೌಂಡ್ಸ್‌ನಲ್ಲಿ ಕಟ್ಟಬೇಕಾಗಿದ್ದು ಅದಕ್ಕೆ ಬೇಕಾದ ಜಮೀನು ಸ್ವಾಧೀನ ಕೊಟ್ಟ ನಂತರ ತೆಗೆದುಕೊಳ್ಳಲಾಗುವುದು. ನೀರು ಸರಬರಾಜು ಮಾಡುವ ಕೊಳವೆಗಳನ್ನು ಹಾಕಲಾಗುತ್ತಿದೆ.

೪. ಮಲಿನ ನೀರನ್ನು ಸಾಗಿಸುವ ಕೆಲಸವನ್ನು ತೆಗೆದುಕೊಳ್ಳಲಾಗಿದ್ದು ಅದು ಪ್ರಗತಿಯಲ್ಲಿದೆ. ಇಲ್ಲಿಯವರೆಗೆ ಯೋಜನೆಯ ವೆಚ್ಚ ರೂ. ೩೭.೧೨ ಕೋಟಿ.

(ಆ) ಯೋಜನೆಯ ಸಿದ್ಧತೆಯ ಪ್ರಕಾರ ೧೯೮೨ರ ಅಂತ್ಯದ ವೇಳೆಗೆ ಪೂರ್ಣಗೊಳಿಸುವ ನಿರೀಕ್ಷೆ ಇತ್ತು. ಮಾನ್ಯ ಮುಖ್ಯಮಂತ್ರಿಗಳು ಯೋಜನೆಯನ್ನು ೨ನೇ ಅಕ್ಟೋಬರ್ ೧೯೮೦ರಂದು ಉದ್ಘಾಟಿಸಿದಾಗ ಈ ಯೋಜನೆಯನ್ನು ಒಂದು ವರ್ಷ ಮುಂಚಿತವಾಗಿ ಕಾರ್ಯಗತಗೊಳಿಸುವಂತೆ ತಿಳಿಸಿದರು. ಕೆಲಸದ ಗಾತ್ರ ಮತ್ತು ಅದಕ್ಕೆ ಬೇಕಾಗುವ ಕಾಲ ಇವುಗಳನ್ನು ಗಣನೆಗೆ ತೆಗೆದುಕೊಂಡು ೧೯೮೧ರ ಅಂತ್ಯದ ವೇಳೆಗೆ ಪೂರ್ಣಗೊಳಿಸಲು ಸಾಧ್ಯವಾಗಲಿಲ್ಲ.

(ಇ) ಯೋಜನೆಯನ್ನು ಆದಷ್ಟು ಜಾಗ್ರತೆ ಮುಗಿಸಲು ಸರ್ವ ಪ್ರಯತ್ನ ಮಾಡಲಾಗುತ್ತಿದೆ. ಈಗ ಮುಗಿದಿರುವ ಕೆಲಸದ ಅಂದಾಜು ಮತ್ತು ಇನ್ನು ಉಳಿದಿರುವ ಕೆಲಸವನ್ನು ಗಣನೆಗೆ ತೆಗೆದು ಕೊಂಡರೆ ೧೯೮೨ರ ಆಗಸ್ಟ್ ೧೫ರ ವೇಳೆಗೆ ಹೆಚ್ಚಿನ ನೀರನ್ನು ಒದಗಿಸಲು ಸರ್ವ ಪ್ರಯತ್ನವನ್ನು ಮಾಡಲಾಗಿದ್ದು ಈ ವೇಳೆಗೆ ಎಲ್ಲ ಕೆಲಸಗಳೂ ಮುಗಿಯುವ ಭರವಸೆಯಿದೆ.